ಸಾಕ್ಷಿಯನ್ನು ದಿನಾಂಕಃ **11.08.2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಹೆಚ್.ಯು.ಎನ್. ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನಾನು ಪ್ರಾಥಮಿಕ ಶಿಕ್ಷಣವನ್ನು ಖರ್ವಾದ ನಾಥಗೇರಿ ಶಾಲೆಯಲ್ಲಿ ಮುಗಿಸಿದ್ದೇನೆ ಹಾಗೂ ಕೊಳಗದ್ದೆಯ ಪ್ರೌಢಶಾಲೆಯಲ್ಲಿ ನನ್ನ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸಿದ್ದೇನೆ. ನನ್ನ ಜನನ ದಿನಾಂಕ 15.06.1973 ಆಗಿರುತ್ತದೆ. ನನ್ನ ಶಾಲಾ ದಾಖಲಾತಿಗಳನ್ನು ನಾನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ಹನುಮಿ ಹನುಮಂತ ಗೌಡ ಯಾರೆಂದು ನನಗೆ ಗೊತ್ತಿಲ್ಲ. ಶಿವಮ್ಮ ಯಾನೆ ಸೇಮಾ ಗಣಪತಿ ಗೌಡ ಯಾರೆಂದು ನನಗೆ ಗೊತ್ತಿಲ್ಲ. ಹನುಮಂತ ನಾಗಪ್ಪ ಗೌಡ ರವರು ನನ್ನ ತಂದೆ. ನನ್ನ ಜನನದ ಪೂರ್ವದಲ್ಲಿನ ನನ್ನ ತಂದೆಯ ಕೌಟುಂಬಿಕ ಮಾಹಿತಿಯ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ನನ್ನ ತಾಯಿಯ ಮದುವೆಯ ನೋಂದಣಿ ಪ್ರಮಾಣ ಪತ್ರ ಇರುವುದಿಲ್ಲ. ನನ್ನ ತಾಯಿಯ ಮದುವೆ ಎಲ್ಲಿ ಆಗಿತ್ತು ಎಂಬುದನ್ನು ನಾನು ಕೇಳಿ ತಿಳಿದಿಲ್ಲ ಹಾಗೂ ಈ ದಾವೆಯನ್ನು ದಾಖಲಿಸಿದ ತರುವಾಯವೂ ಸಹ ನಾನು ಕೇಳಿರುವುದಿಲ್ಲ. ನನ್ನ ತಾಯಿಯ ತವರು ಮನೆ ನಾಜಗಾರ ಆಗಿದೆ. ನಾನು ನನ್ನ ತಾಯಿಯ ಮದುವೆಯಾದ ಎಷ್ಟು ವರ್ಷಗಳ ತರುವಾಯ ಜನಿಸಿದ್ದೇನೆ ಎಂಬುದು ನನಗೆ ಗೊತ್ತಿಲ್ಲ. ನನ್ನ ತಾಯಿಗೆ ನಾನು ಜನಿಸುವ ಪೂರ್ವದಲ್ಲಿ ಬೇರೆ ಮಕ್ಕಳು ಇರುವುದಿಲ್ಲ. ನನ್ನ ತಾಯಿಗೆ ನಾನೊಬ್ಬಳೇ ಮಗಳು. ನಾನು ಹುಟ್ಟುವ ಎಷ್ಟು ವರ್ಷಗಳ ಪೂರ್ವದಲ್ಲಿ ನನ್ನ ತಾಯಿಯ ಮದುವೆಯಾಗಿದೆ ಎಂಬುದನ್ನು ನನಗೆ ಹೇಳಲು ಆಗುವುದಿಲ್ಲ.

ದಾವಾಸ್ತಿಗಳು ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಆಸ್ತಿಗಳು ಎಂದಾಗ ಸಾಕ್ಷಿಯು ಸುಮ್ಮನೆ ಇರುತ್ತಾರೆ. ನನ್ನ ತಂದೆಯು ಭೂ ನ್ಯಾಯ ಮಂಡಳಿಯ ದಾಖಲೆಗಳಲ್ಲಿ ಹುಚ್ಚ ಇದ್ದನು ಎಂದು ನಮೂದಾಗಿತ್ತು ಎಂದಾಗ ಸಾಕ್ಷಿಯು ನನ್ನ ತಂದೆಯು ಸ್ವಲ್ಪ ಮಂದ ಇದ್ದರು ಎಂದು ನುಡಿದಿರುತ್ತಾರೆ. ನನ್ನ ತಂದೆಯು 2006 ನೇ ಸಾಲಿನಲ್ಲಿ ಮೃತರಾಗಿದ್ದಾರೆ, ಅವರ ಮರಣ ಪ್ರಮಾಣ ಪತ್ರವನ್ನು ನಾನು ಪಡೆದಿದ್ದೇನೆ. ನನ್ನ ತಂದೆಯವರು ಮಂದ ಇದ್ದ ಕಾರಣದಿಂದಾಗಿ ನನ್ನ ತಾಯಿಯನ್ನು ಅವರಿಗೆ ಆರಕ್ಷಕರನ್ನಾಗಿ ಮಾಡಿದ್ದರ ಕುರಿತಾಗಿ ನಾವು ಯಾವುದೇ ದಾಖಲೆಯನ್ನು ಮಾಡಿಸಿಲ್ಲ. ನನ್ನ ತಂದೆಗೆ ಯಾವಾಗಿನಿಂದ ಮಂದ ಬುದ್ಧಿ ಇತ್ತು ಎಂಬುದು ನನಗೆ ಹೇಳಲು ಆಗುವುದಿಲ್ಲ. ನನ್ನ ತಂದೆಯು ಕಚೇರಿ ವ್ಯವಹಾರಗಳಿಗೆ ಹೋಗುತ್ತಿರಲಿಲ್ಲ.

ನನ್ನ ತಾಯಿಯು ಹನುಮಂತ ನಾಗಪ್ಪ ಗೌಡರವರನ್ನು ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ಹನುಮಂತ ನಾಗಪ್ಪ ಗೌಡರವರು ಕಾನೂನುಬದ್ಧವಾಗಿ ಈ ದಾವೆಯ ಮೂಲ 1 ನೇ ವಾದಿಯನ್ನು ಮದುವೆಯಾಗಿದ್ದರು ಎಂದರೆ ಸರಿಯಲ್ಲ ಹಾಗೂ 2 ನೇ ವಾದಿಯು ಅವರ ಮಗಳು ಎಂದರೆ ಸರಿಯಲ್ಲ.

ನಾನು ಹಾಗೂ 2 ನೇ ವಾದಿಯು ಇಬ್ಬರೂ ಸಹ ಹನುಮಂತ ನಾಗಪ್ಪ ಗೌಡ ರವರ ಮಕ್ಕಳು ಎಂದರೆ ಸರಿಯಲ್ಲ. ನಾನು ಹನುಮಂತ ನಾಗಪ್ಪ ಗೌಡ ರವರ ಮಗಳು ಎಂಬುದಕ್ಕೆ ವೈಜ್ಞಾನಿಕ ಪರೀಕ್ಷೆಗೆ ಒಳಪಡಲು ನನ್ನ ಆಕ್ಷೇಪಣೆ ಇರುವುದಿಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.